ವಿ.72 (182)

# ಕರ್ನಾಟಕ ವಿಧಾನ ಪರಿಷತ್ತು

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಎಂ.ಗೋಪಾಲಸ್ವಾಮಿ, ಶ್ರೀ ಹೆಚ್.ಎಂ.ರಮೇಶ್‌ಗೌಡ ಹಾಗೂ ಶ್ರೀ ಎಸ್.ಎಲ್.ಭೋಜೇಗೌಡ ರವರುಗಳು ನಿಯಮ-72ರ ಅಡಿಯಲ್ಲಿ ಪ್ರಸ್ತಾಪಿಸಿರುವ ಗಮನ ಸೆಳೆಯುವ ಸೂಚನೆ**

ವಿಷಯ: ರಾಷ್ಟ್ರೀಯ ಹೆದ್ದಾರಿಗಳನ್ನು ನಿರ್ಮಿಸುವ ಮುಖ್ಯ ಉದ್ದೇಶ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಸುಗಮವಾಗಿ ಮತ್ತು ತ್ವರಿತವಾಗಿ ತಲುಪುವುದಾಗಿದೆ. ರಾಜ್ಯದಲ್ಲಿ ಹಲವಾರು ರಾಷ್ಟ್ರೀಯ ಹೆದ್ದಾರಿಗಳಿದ್ದು, ಈ ಹೆದ್ದಾರಿಗಳಲ್ಲಿ ನೂರಾರು ಟೋಲ್ ಪ್ಲಾಜಾಗಳು ಕಾರ್ಯನಿರ್ವಹಿಸುತ್ತಿವೆ ಸರ್ಕಾರದ ನಿಯಮಗಳಂತೆ ಈ ಟೋಲ್‌ಗಳಲ್ಲಿ ಪ್ರಯಾಣಿಕರಿಗೆ ಒದಗಿಸಬೇಕಾದ ಸೇವೆ/ಸೌಲಭ್ಯಗಳನ್ನು ಒದಗಿಸುತ್ತಿಲ್ಲ. ಅಲ್ಲದೆ ಇತ್ತೀಚಿನ ದಿನಗಳಲ್ಲಿ ದೇಶಾದ್ಯಂತ ಜಾರಿಗೆ ತಂದಿರುವ ಫಾಸ್ಟ್ ಟ್ಯಾಗ್ ತಂತ್ರಾಂಶವು ಕಳಪೆ ಗುಣಮಟ್ಟದಿಂದ ಕೂಡಿದ್ದು, ಫಾಸ್ಟ್ ಟ್ಯಾಗ್ ಸೆನ್ಸಾರ್‌ಗಳು ಸರಿಯಾಗಿ ಕೆಲಸ ಮಾಡದಿರುವುದರಿಂದ ಲಕ್ಷಾಂತರ ಪ್ರಯಾಣಿಕರು ಟೋಲ್‌ಗಳಲ್ಲಿ ಕಾಯಬೇಕಾದ ಪರಿಸ್ಥಿತಿ ಒದಗಿದ್ದು ರಾಷ್ಟ್ರದ ಅಮೂಲ್ಯ ಮಾನವ ಸಂಪತ್ತು ವ್ಯರ್ಥವಾಗುತ್ತಿದೆ. ಅಲ್ಲದೆ ಆಂಬುಲೆನ್ಸ್ ಹಾಗೂ ವಿ.ಐ.ಪಿ ವಾಹನಗಳ ಸಂಚಾರಕ್ಕೆ ಕೆಲವು ಟೋಲ್‌ಗಳಲ್ಲಿ ಪ್ರತ್ಯೇಕವಾದ ಲೇನ್ ಕಾಪಾಡದೇ ಇರುವುದರಿಂದ ತುರ್ತು ಸಂಚಾರಕ್ಕೆ ಅವಕಾಶವಿಲ್ಲದಂತಾಗಿರುವ ಬಗ್ಗೆ ಮಾನ್ಯ ಉಪಮುಖ್ಯಮಂತ್ರಿಗಳ ಹಾಗೂ ಲೋಕೋಪಯೋಗಿ ಸಚಿವರ ಗಮನ ಸೆಳೆಯಬಯಸುತ್ತೇನೆ.

********

## ಸರ್ಕಾರದ ಉತ್ತರ

ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ವ್ಯಾಪ್ತಿಯಲ್ಲಿ 46 ಮತ್ತು ರಾಷ್ಟ್ರೀಯ ಹೆದ್ದಾರಿ ವಲಯದ ವ್ಯಾಪ್ತಿಯಲ್ಲಿ 6 ಸಂಖ್ಯೆಯ ಟೋಲ್ ಪ್ಲಾಜಾಗಳು ಕಾರ್ಯನಿರ್ವಹಿಸುತ್ತಿದ್ದು, ಅವುಗಳ ಮೂಲಕ ಟೋಲ್ ಸಂಗ್ರಹಿಸಲಾಗುತ್ತಿದೆ.

ಮೇಲ್ಕಂಡ ಸೂಚನೆಗೆ ಸಂಬಂಧಿಸಿದಂತೆ ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವು ಈ ಕೆಳಕಂಡಂತೆ ವರದಿಸಿದೆ:

1. ರಸ್ತೆ ಬಳಕೆದಾರರಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಎಲ್ಲಾ ಟೋಲ್ ಪ್ಲಾಜಾಗಳಲ್ಲಿ ಹೆಚ್ಚಿನ ಸೌಕರ್ಯ ಒದಗಿಸಲು ರಸ್ತೆ ರಿಯಾಯಿತಿ ಒಪ್ಪಂದಗಳಲ್ಲಿ ಅವಕಾಶಗಳನ್ನು ಹೊಂದಿದೆ. ಆದರೆ ಭೂಸ್ವಾಧೀನ ಸಮಸ್ಯೆಗಳಿರುವ ಟೋಲ್ ಪ್ಲಾಜಾಗಳ ಸ್ಥಳಗಳಲ್ಲಿ ಮಾತ್ರ ಸ್ವಚ್ಛ ಭಾರತ ಯೋಜನೆಯಡಿ ಶೌಚಾಲಯಗಳು ನಿರ್ಮಾಣ ಹಂತದಲ್ಲಿವೆ.
2. ಎಲ್ಲಾ ಟೋಲ್ ಪ್ಲಾಜಾಗಳಲ್ಲಿ ರೇಡಿಯೋ ಫ್ರೀಕ್ವೆನ್ಸಿ ಐಡೆಂಟಿಫಿಕೇಶನ್ ಡಿವೈಸಸ್ (RFID) ಅಳವಡಿಸಲಾಗಿದ್ದು, ಇದು ಫಾಸ್ಟ್‌ಟ್ಯಾಗ್ ಗಳನ್ನು ಸ್ವಯಂಚಾಲಿತವಾಗಿ ಓದುವ, ಗುರುತಿಸುವ ವಿಧಾನವಾಗಿದೆ. ಹಾಗೂ ಎಲ್ಲಾ ಟೋಲ್ ಪ್ಲಾಜಾಗಳಲ್ಲಿ ಎಲ್ಲಾ ಫಾಸ್ಟ್‌ಟ್ಯಾಗ್ ಲೇನ್‌ಗಳು ಸರಿಯಾಗಿ ಕಾರ್ಯನಿರ್ವಹಿಸುತ್ತಿವೆ.
3. ಎಲ್ಲಾ ಟೋಲ್ ಪ್ಲಾಜಾಗಳ ಲೇನ್‌ಗಳನ್ನು ಈಗ ಫಾಸ್ಟ್ ಟ್ಯಾಗ್ ಸೌಲಭ್ಯಗಳೊಂದಿಗೆ ಸಕ್ರಿಯಗೊಳಿಸಲಾಗಿದೆ ಮತ್ತು ರಸ್ತೆ ಬಳಕೆದಾರರ ಕಾಯುವ ಸಮಯವನ್ನು ಗಣನೀಯವಾಗಿ ಕಡಿಮೆ ಮಾಡಲಾಗಿದೆ (ಗರಿಷ್ಠ ಸಮಯ 2-3 ನಿಮಿಷಗಳು)

4. ಅಂಬುಲೆನ್ಸ್ ಮತ್ತು ವಿಐಪಿ ವಾಹನಗಳ ಅಡತಡೆಯಿಲ್ಲದ ಚಾಲನೆಗಾಗಿ ಟೋಲ್ ಪ್ಲಾಜಾಗಳಲ್ಲಿ ಮೀಸಲಾದ ಪ್ರತ್ಯೇಕ ಲೇನ್ ಲಭ್ಯವಿದೆ. ಎಲ್ಲಾ ಟೋಲ್ ಪ್ಲಾಜಾಗಳಲ್ಲಿ ಮೀಸಲಾದ ಪ್ರತ್ಯೇಕ ಲೇನ್‌ಗಳಲ್ಲಿ ದಟ್ಟಣೆಯನ್ನು ತಪ್ಪಿಸಲು ಮತ್ತು ಮಾರ್ಗಗಳ ನಿರ್ವಹಣೆಯನ್ನು ಮಾರ್ಷಲ್‌ಗಳು ಕೈಗೊಳ್ಳುತ್ತಿದ್ದಾರೆ.
5. ಎಲ್ಲಾ ಟೋಲ್ ಪ್ಲಾಜಾಗಳಲ್ಲಿ ವರದಿಯಾಗುವ ದೋಷಗಳು ಸಾಮಾನ್ಯವಾಗಿ ವಾಹನ ಬಳಕೆದಾರರು ಉಪಯೋಗಿಸುವ ಫಾಸ್ಟ್‌ಟ್ಯಾಗ್‌ಗಳಲ್ಲಿ ಕನಿಷ್ಠ ಮೊತ್ತದ ಸಮತೋಲನ ಕಾಪಾಡಿಕೊಳ್ಳದಿರುವುದಕ್ಕೆ ಮತ್ತು ಫಾಸ್ಟ್ ಟ್ಯಾಗ್ ಅಳವಡಿಕೆ ಇಲ್ಲದ ವಾಹನಗಳನ್ನು ಕಪ್ಪ ಪಟ್ಟಿಗೆ ಸೇರಿಸುವುದಾಗಿದೆ.
6. ಟೋಲ್ ಪ್ಲಾಜಾಗಳಿಗೆ ನಿಯೋಜಿಸಲಾಗಿರುವ ಎಲ್ಲಾ ಸಿಬ್ಬಂದಿಗಳು ವಿಐಪಿ ಗಳು ಮತ್ತು ಸಾರ್ವಜನಿಕರೊಂದಿಗೆ ವ್ಯವಹರಿಸುವಾಗ ವಿನಯಶೀಲತೆ ಮತ್ತು ವಿನಮ್ರರಾಗಿರಲು ಸೂಚಿಸಲಾಗಿದೆ.
7. ರಾಜ್ಯದಲ್ಲಿ ಫಾಸ್ಟ್ ಟ್ಯಾಗ್ ಬಳಕೆ ವಾಹನಗಳು ಇ.ಟಿ.ಸಿ. ಪ್ರವೇಶಿಸುವ ಸಂಖ್ಯೆ ಶೇ.92 ತಲುಪಿದೆ ಎಂದು NHAI ರವರು ವರದಿ ನೀಡಿರುತ್ತಾರೆ.

(ಗೋವಿಂದ.ಎಂ.ಕಾರಜೋಳ)
ಉಪ ಮುಖ್ಯಮಂತ್ರಿ
ಲೋಕೋಪಯೋಗಿ ಇಲಾಖೆ.

**ಸಂಖ್ಯೆ:** ಲೋಇ 106 ಸಿಎನ್‌ಹೆಚ್ 2021 (ಇ)